**ದಿಃ 14.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಪಿ.ಬಿ.ಎಸ್. ವಕೀಲರಿಂದಃ

ನನ್ನ ಪರವಾಗಿ ಅನಿಲ ಸರಬರಾಜು ಪಾಸ್ ಪುಸ್ತಕ ಹಾಜರುಮಾಡಿದ್ದು ಅದನ್ನು ನಿಡಿ-12 ಎಂದು, 2 ರಸೀದಿಗಳನ್ನು  ಹಾಜರುಮಾಡಿದ್ದು ಅವುಗಳನ್ನು ನಿಡಿ-13 ಮತ್ತು 14 ಎಂದು, ದಿನಾಂಕ 03.06.2015ರ ಬಾಡಿಗೆ ಕರಾರನ್ನು ಹಾಜರುಮಾಡಿದ್ದು ಸದರಿ ದಾಖಲೆ ಜೆರಾಕ್ಸ್ ಪ್ರತಿ ಎಂದು ವಾದಿ ಪರ ವಕೀಲರು ತಕರಾರು ಮಾಡಿದ್ದು ಸದರಿ ತಕರಾರಿಗೆ ಒಳಪಟ್ಟು ಅದನ್ನು ನಿಡಿ-15 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಡಿ-15ಎ ಯಿಂದ ಡಿ ಎಂದು, ದಿನಾಂಕ 12.08.2015ರ ಅಧಿಕಾರ ಪತ್ರ ಹಾಜರುಮಾಡಿದ್ದು ಸದರಿ ಅಧಿಕಾರ ಪತ್ರಕ್ಕೆ ಸೂಕ್ತ ಸ್ಟ್ಯಾಂಪ್ ಶುಲ್ಕ ಕಟ್ಟದೇ ಇರಲು ಕಂಡು ಬರುವ ಕಾರಣ ಹಾಗೂ ಸದರಿ ದಾಖಲೆ ನೋಂದಣಿ ಬಗ್ಗೆ ಅನುಮಾನ ಇರುವ ಕಾರಣ ಸದರಿ ದಾಖಲೆಯನ್ನು ನಿಶಾನೆಗೊಳಿಸಿರುವುದಿಲ್ಲ ಹಾಗೂ ಆರ್.ಅರ್.ಟಿ.ಎಸ್.ಸಂಖ್ಯೆಃ 470/2017-18 ರ ಆದೇಶದ ಯಥಾನಕಲು ಹಾಜರುಮಾಡಿದ್ದು ಅದನ್ನು ನಿಡಿ-16 ಎಂದು ಗುರುತಿಸಲಾಗಿರುತ್ತದೆ.

ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಗಿರುತ್ತದೆ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**